# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ.ಕೇಸ್ ನಂ. 20/2017**

**ದೋ.ಸಾ. :16 ಫ್ರಾ.ಸಾ. : 16**

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ಅನುಪಮಾ ನಾಯಕ್ |
| ತಂದೆಯ ಹೆಸರು | : | ಸುರೇಶ ನಾಯಕ್ |
| ವಯಸ್ಸು | : | 42 ವರ್ಷ |
| ಕೆಲಸ | : | ತಜ್ಞ ವೈದ್ಯರು, ತಾಲೂಕಾ ಆಸ್ಪತ್ರೆ, ಅಂಕೋಲಾ |
| ವಾಸ | : | ಅಂಕೋಲಾ |

**ದಿನಾಂಕಃ 20-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ನಾನು ದಿ.17-03-2013 ರಿಂದ 31-08-2019 ರವರೆಗೆ ಅಂಕೋಲಾ ತಾಲೂಕಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿ.24-01-2017 ರಂದು ಅಂಕೋಲಾ ಪೊಲೀಸ್ ಠಾಣೆಯ ಸಿಬ್ಬಂದಿಯಾದ ಡಬ್ಲ್ಯು.ಪಿ.ಸಿ-536 ರವರು ಒಂದು ಕೋರಿಕೆ ಪತ್ರದೊಂದಿಗೆ ಈ ಪ್ರಕರಣದ ನೊಂದ ಮಹಿಳೆಯ ವೈದ್ಯಕೀಯ ಪರೀಕ್ಷೆಯ ಕುರಿತು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅದರಂತೆ ನಾನು ಆಕೆಯನ್ನು ವಿಚಾರಿಸಿದಾಗ, ಈ ಪ್ರಕರಣದ ಬಗ್ಗೆ ಮಾಹಿತಿ ನೀಡಲು ನಿರಾಕರಿಸಿರುತ್ತಾರೆ. ಆನಂತರ ಆಕೆಯ ಸಮ್ಮತಿಯ ಮೇರೆಗೆ ನಾನು ಆಕೆಯ general examination ಮಾಡಿದಾಗ, ಆಕೆಯ ಎಡಗೈಯ ಹೆಬ್ಬೆರಳಿನ ಹತ್ತಿರ ಒಂದು ತರಚಿದ ಗಾಯ ಕಂಡುಬಂದಿರುತ್ತದೆ. ಆನಂತರ local examination ಮಾಡಿದಾಗ ಆಕೆಯ ಖಾಸಗಿ ಭಾಗದಲ್ಲಿ ಯಾವುದೇ ರೀತಿಯ ಗಾಯವೂ ಕಂಡು ಬಂದಿರುವುದಿಲ್ಲ. ಆನಂತರ ಪೊಲೀಸರ ಕೋರಿಕೆಯಂತೆ, ಆರ್.ಎಫ್.ಎಸ್.ಎಲ್. ಗೆ ಕಳುಹಿಸುವ ಸಂಬಂಧ ಕೆಲವು ಮಾದರಿಗಳನ್ನು ಸಂಗ್ರಹಿಸಿ, ಪೊಲೀಸರಿಗೆ ನೀಡಿರುತ್ತೇನೆ ಹಾಗೂ ಈ ಬಗ್ಗೆ ವರದಿಯನ್ನು ನೀಡಿರುತ್ತೇನೆ. ಅದೇ ರೀತಿ, ಚಾಸಾ-1 ರವರ ವೈದ್ಯಕೀಯ ಪರೀಕ್ಷಾ ಕಾಲಕ್ಕೆ, ಆಕೆಯ ಬಟ್ಟೆಗಳನ್ನೂ

ಸಹ ಸಂಗ್ರಹಿಸಿ ಪೊಲೀಸರಿಗೆ ನೀಡಿರುತ್ತೇನೆ. ಪೊಲೀಸರಿಂದ ಬಂದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–21 ಎಂದು, ಸಾಕ್ಷಿಯ ಸಹಿಯನ್ನು ನಿಪಿ–21(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–22 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–22(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ